

# ದಿಂಬಿನಡಿಯಲ್ಲೊಂದು ವಿಷಸರ್ಪ


■ **ಯಂಡಮೂರಿ ವೀರೇಂದ್ರನಾಥ್**

ಕನ್ನಡಕ್ಕೆ: ಸಂಡೂರು ವೆಂಕಟೇಶ್

ಕಲೆ: ಮನೋಹರ್ ಆಚಾರ್ಯ


## ಎರಿಟೋಮೇನಿಯಾ

ಆಗವನು 'ನಿಮ್ಮ ಬ್ಯಾಕ್‌ಯಾರ್ಡ್ ಚೆನ್ನಾಗಿದೆ ಅಂದೆ. ಪರ್ಮಿಷನ್ ಕೊಟ್ಟರೆ ಆಗಾಗ ಅಲ್ಲಿಗೆ ಹೋಗ್ತೇನೆ' ಎಂದನು ಅರ್ಥಗರ್ಭಿತವಾಗಿ.

ಸ್ಟೂಲ್ ಎತ್ತಿಕೊಂಡು ಹೊರಟವಳು ಬಾಗಿಲ ಬಳಿ ನಿಂತು 'ನನ್ನ ಗಂಡ ಪೊಲೀಸ್ ಆಫೀಸರ್. ನಿನ್ನಂಥ ಕ್ರಿಮಿನಲ್‌ಗಳ ಬ್ಯಾಕ್ ಮೇಲೆ ಬ್ಯಾಂಡ್ ಬಾರಿಸ್ತಾರೆ' ಎಂದು ಅಲ್ಲಿಂದ ಹೊರಟು ಹೋದಳು.

ಇಂತಹ ಎಷ್ಟೋ ಕೇಸುಗಳನ್ನು ನೋಡಿದ್ದೇನೆ ಅಂದುಕೊಂಡು ನಕ್ಕನು. ಬಹಳ ಸಂದರ್ಭಗಳಲ್ಲಿ ಮೊದಮೊದಲು ಹೆಂಗಸರು ಹೀಗೆ ಪ್ರತಿಕ್ರಿಯಿಸುತ್ತಾರೆ. ಕೊನೆಗೆ ಸಿಕ್ಕಿ ಬಿಡುತ್ತಾರೆ ಎಂದವನಿಗೆ ತಿಳಿದಿತ್ತು. ಆದರೆ ಅವನಿಗೆ ತಿಳಿಯದ್ದು ಏನೆಂದರೆ, ಕಲ್ಯಾಣಿ ಅವನ ಸಡಿಲ ನಡತೆಯ ಗೆಳತಿಯರಂತಲ್ಲ ಎನ್ನುವುದು.

ಆದರೆ ಅವನಿಗೆ ಅವನದೇ ಟೆಕ್ನಿಕ್‌ಗಳಿದ್ದವು. ಮುಂದೆ ಏನು ಮಾಡಲಿ ಎಂದು ಯೋಚಿಸುತ್ತಿದ್ದಾಗ ಅಲ್ಲಿ ಗಂಡ ಹೆಂಡತಿ ನಡುವೆ ವಾಗ್ವಾದ ನಡೆದಿತ್ತು.

'ಅವನಿಗೆ ಯಾಕೆ ರೂಂ ಕೊಟ್ಟೆ?' ಕೇಳಿದಳು ಕಲ್ಯಾಣಿ.

'ಅದ್ಯಾಕೆ ಹಾಗೆ ಕೇಳ್ತಿಯ ಕಲ್ಯಾಣಿ... ಟುಲೆಟ್ ಬೋರ್ಡ್ ಇಟ್ಟಿದ್ದು ಅದಕ್ಕೆ ಅಲ್ಲವೇ?'

'ಕೊಡುವ ಮೊದಲು ಅವನು ಎಂತವನೋ ತಿಳಿದುಕೊಳ್ಳಬೇಕಿತ್ತು'

'ಅಂದರೆ ಬಾಡಿಗೆಗೆ ಕೊಡುವುದಕ್ಕೆ ಮೊದಲು ಸಿ.ಐ.ಡಿ. ಎನ್‌ಕ್ವೈರಿ ಮಾಡಬೇಕಿತ್ತೇನು?'

ಅವಳು ಅದಕ್ಕೆ ಉತ್ತರಿಸದೆ 'ಅವನು ನನಗಿಷ್ಟವಾಗಲಿಲ್ಲ' ಎಂದಳು ಚುಟುಕಾಗಿ.

'ಅವನು ನಮ್ಮ ನೈಬರ್. ಅಕ್ಕಪಕ್ಕದವರನ್ನು ಪ್ರೀತಿಸಿ ಅಂತ ಮಹಾತ್ಮಗಾಂಧಿ ಹೇಳಿದ್ದಾರೆ' ಎಂದನು.

'ಹುಚ್ಚಾಟ ಮಾಡಿದರೆ ಕೆನ್ನೆಗೆ ಬಾರಿಸು ಅಂತ ಇಂದಿರಾಗಾಂಧಿ ಹೇಳಿದ್ದಾರೆ'

'ಪಕ್ಕದ ದೇಶಕ್ಕೂ ನಮ್ಮ ಪಕ್ಕದ ರೂಂಗೂ ಏನು ಸಂಬಂಧ?'

'ಏನೋ... ಅದೆಲ್ಲ ನಂಗೆ ಗೊತ್ತಿಲ್ಲ. ನನಗಿಷ್ಟವಿಲ್ಲ ಅಷ್ಟೇ' ಎಂದಳು.

'ಏಕೆ?'

ಸ್ವಿಮ್ಮಿಂಗ್ ಪೂಲ್‌ನಲ್ಲಿ ಅವನ ಅಸಭ್ಯ ಸ್ಪರ್ಶ ನೆನಪಾಯ್ತು. ಆದರೆ ಗಂಡನಿಗೆ ಹೇಗೆ ಹೇಳಿಯಾಳು?

'ಇಷ್ಟವಾಗದಿರುವುದಕ್ಕೆ ಕಾರಣಗಳು ಏನಿರುತ್ತವೆ?' ಎಂದು ಒಂದು ಕ್ಷಣ ತಡೆದು 'ಅವನು ನನಗೆ ವಾಸನೆ ಹಾಕುತ್ತಾನೆ... ಕೊಳೆತ ಮೊಟ್ಟೆಯ ವಾಸನೆ' ಎಂದಳು.

ಕೃಷ್ಣ ಕೋಪದಿಂದ 'ಅವನಿರುವುದು ನಮ್ಮ ಪಕ್ಕದ ರೂಂನಲ್ಲಿ. ನಿನ್ನ ಮಂಚದಲ್ಲಲ್ಲ,' ಎಂದುಬಿಟ್ಟನು.